b) Will be considered.

c) No proposal at present.

ನೇತ್ರಾವತಿ ನದಿಯ ಎರಡೂ ದಡದ ರೈತರಿಗೆ ನೀರೆತ್ತಲು ಅಡ್ಡಿಪಡಿಸದಂತೆ ಮನವಿ

೯೯೭ (೧೬೧೮) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ನೀರಾವರಿ ಮತ್ತು ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ ಹೊಳೆಯ ಎರಡೂ ದಡಗಳಲ್ಲಿ ಕೃಷಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಆಗಿನ ಡಿ. ಸಿ. ಯವರು ಕೃಷಿಕರಿಗೆ ಒತ್ತಾಯಿಸಿ ವಿದ್ಯುತ್ ಪಂಪುಗಳಿಗೆ ವಿದ್ಯುತ್ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಜನವರಿ–ಫೆಬ್ರುವರಿ ತಿಂಗಳ ನಂತರ ಹೊಳೆಯಿಂದ ನೀರೆತ್ತದಂತೆ ವಿದ್ಯುತ್ ಸಂಪರ್ಕ ಕಡಿಯುವಂತೆ ಕಾನೂನು ಮಾಡಿರುವುದು ಸರಿಯೇ ?

ಇ) ಇದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೇ ಹಾಗು ಬದಲಿ ನೀರಾವರಿ ವ್ಯವಸ್ಥೆ ಸರ್ಕಾರ ಮಾಡುವುದೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಇಲ್ಲ.

ಆ) ಬೇಸಿಗೆಯಲ್ಲಿ ನದಿಗಳಲ್ಲಿ ಹರಿಯುವ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಕುಡಿಯುವ ನೀರಿನ ತೊಂದರೆ ನಿವಾರಿಸಲು ಫೆಬ್ರುವರಿ ಯಿಂದ ಜೂನ್ ತಿಂಗಳವರೆಗೆ ನದಿಗಳಿಂದ ನೀರಾವರಿಗೆ ನೀರೆತ್ತುವುದನ್ನು ಸರ್ಕಾರದ ದಿನಾಂಕ ೧೮–೫–೮೭ರ ಸುತ್ತೋಲೆ ನಂ. ಪಿಡಬ್ಲ್ಯೂಡಿ ೧೩೨ ಐ. ಎಫ್. ವೈ. ೮೬ರಲ್ಲಿ ನಿಷೇಧಿಸಲಾಗಿದೆ.

ಇ) ರೈತರಿಗೆ ತೊಂದರೆಯಾಗುವುದು. ಆದರೂ ಈ ಕ್ರಮ ಅನಿವಾರ್ಯವಾಗಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿಗೂ ಸಹ ತೊಂದರೆ ಇರುವ ಸಂದರ್ಭದಲ್ಲಿ ನೀರಾವರಿಗೆ ಬದಲಿ ವ್ಯವಸ್ಥೆ ಮಾಡುವುದು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು.—ಶ್ರೀ ಎಂ. ಮಲ್ಲಿಖಾರ್ಜುನ ಖರ್ಗೆಯವರದು ಮುಂದೆ ಹೋಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಕುಕ್ಕೆ ಸುಬ್ರಹ್ಮಣ್ಯ ದೇವಳದ ಹಿಂದಿನ ಟ್ರಸ್ಟಿಗಳ ಬೇಜವಾಬ್ದಾರಿ ವ್ಯವಹಾರಗಳಿಂದಾಗಿ ಲಕ್ಷಾಂತರ ರೂಪಾಯಿಗಳು ದೇವಳಕ್ಕೆ ನಷ್ಟ ಉಂಟಾದ ಬಗ್ಗೆ ಹಾಗೂ ದೇವಳದ ಟ್ರಸ್ಟಿಗಳ ನೇಮಕವಾಗದಿರುವುದರಿಂದ ಭಕ್ತರಿಗೆ ತೊಂದರೆಯಾಗಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಕುಕ್ಕೆ ಸುಬ್ರಹ್ಮಣ್ಯ ದೇವಳದ ಹಿಂದಿನ ಟ್ರಸ್ಟಿಗಳ ಬೇಜವಾಬ್ದಾರಿ ವ್ಯವಹಾರಗಳಿಂದಾಗಿ ಲಕ್ಷಾಂತರ ರೂಪಾಯಿ ದೇವಳಕ್ಕೆ ನಷ್ಟ ಉಂಟಾದ ಬಗ್ಗೆ, ದೇವಳದ ಟ್ರಸ್ಟಿಗಳ ನೇಮಕ ಆಗದೇ ಇರುವುದರಿಂದ ಭಕ್ತರಿಗೆ ತೊಂದರೆಯಾಗಿರುವ ಬಗೆ ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—(ಮಾನ್ಯ ಕಂದಾಯ ಹಾಗೂ ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಶ್ರೀ ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಕುಕ್ಕೆ, ಸುಳ್ಯ ತಾಲ್ಲೂಕ್, ದಕ್ಷಿಣ ಕನ್ನಡ ಜಿಲ್ಲೆ ಒಂದು ಲಿಸ್ಟ್‌ಡ್ ಸಂಸ್ಥೆಯಾಗಿದ್ದು, ಮದ್ರಾಸ್ ಹಿಂದೂ ಧಾರ್ಮಿಕ ಮತ್ತು ದತ್ತಿ ಉಂಬಳಿ ಕಾಯ್ದೆ ೧೯೫೧ರ ಅಡಿಯಲ್ಲಿ ಬರುತ್ತದೆ. ಇದರ ಆಡಳಿತ ನಿರ್ವಹಣೆಗೋಸ್ಕರ ಒಂದು ಸ್ಕೀಂ ಕೂಡ ಇರುತ್ತದೆ. ಈ ಸ್ಕೀಂನ ಪ್ರಕಾರ ೫ ಜನ ಸದಸ್ಯರುಳ್ಳ ಸಮಿತಿಯನ್ನು ೫ ವರ್ಷಗಳ ಕಾಲಾವಧಿಗೆ ಧಾರ್ಮಿಕ ದತ್ತಿ ಆಯುಕ್ತರು ತಮ್ಮ ಆದೇಶ ಸಂಖ್ಯೆ: ಎ. ಡಿ. ಎಂ ೮ ಎಂ. ಎಸ್. ಸಿ. ಎಲ್. ಎನ್. ಡಿ. ೧೫೨/೮೪-೮೫ ದಿನಾಂಕ: ೪-೧-೮೫ರಲ್ಲಿ ಸಮಿತಿಯನ್ನು ರಚಿಸಿರುತ್ತಾರೆ.

ಈ ಸಮಿತಿಯ ಅವಧಿಯು ದಿನಾಂಕ ೩-೧-೯೦ಕ್ಕೆ ಮುಗಿದಿರುತ್ತದೆ. ಈ ಸಮಿತಿಯು ಹೊಸದಾಗಿ ಸಮಿತಿ ರಚಿಸುವವರೆಗೆ ಮುಂದುವರಿಯಬಹುದಾಗಿದೆ. ಹೊಸ ಸಮಿತಿಯನ್ನು ರಚಿಸಲು ಜಿಲ್ಲಾಧಿಕಾರಿಗಳು ಅರ್ಜಿಗಳನ್ನು ಆಹ್ವಾನ ಮಾಡಲು ಹೊರಡಿಸಿದ್ದ ಅಧಿಸೂಚನೆಯ ವಿರುದ್ಧ ಶ್ರೀ ಕೆ. ನಾಗೇಶ್ ರೈ ಎಂಬುವವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: ೨೩೧೮/೮೯: ದಿನಾಂಕ ೨೧-೧೨-೯೦ರಲ್ಲಿ ತಡೆಯಾಜ್ಞೆ ಪಡೆದಿರುತ್ತಾರೆ.

ಈ ಸಮಿತಿಯ ಸದಸ್ಯರುಗಳು ಸರ್ಕಾರದ ಅನುಮತಿ ಪಡೆಯದೆ, ಕೆಲವೊಂದು ಕಾಮಗಾರಿ ಕೆಲಸಗಳನ್ನು ನಿರ್ವಹಿಸಿದ್ದು, ಇದರ ಬಗ್ಗೆ ಆಡಿಟ್ ವರದಿಯಲ್ಲಿ ೨೭ ಲಕ್ಷ ರೂಪಾಯಿಗಳ ಆಕ್ಷೇಪಣೆ ಮಾಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಇದರ ಬಗ್ಗೆ ಸಂಬಂಧಿಸಿದ ಸದಸ್ಯರುಗಳಿಗೆ ಷೋಕಾಸ್ ನೋಟೀಸ್‌ನ್ನು ಜಾರಿಗೊಳಿಸಿರುತ್ತಾರೆ. ಆದರೆ ಸದರಿ ನೋಟೀಸಿಗೆ ಅವರು ಸಮಜಾಯಿಶಿ ನೀಡಿರುವುದಿಲ್ಲ.

ಮೇಲೆ ತಿಳಿಸಿರುವ ಆರ್ಥಿಕ ಅಕ್ರಮ ಮತ್ತು ದುರ್ವರ್ತನೆಯ ಬಗ್ಗೆ ಧಾರ್ಮಿಕ ದತ್ತಿ ಆಯುಕ್ತರು ತಮ್ಮ ಆದೇಶ ಸಂಖ್ಯೆ ಎ. ಡಿ. ಎಂ. ೮ ಸಿ. ಆರ್. ೧೭೨:೮೯/೯೦ ದಿನಾಂಕ ೨೨-೧-೧೯೯೦ರ ಪ್ರಕಾರ ಮತ್ತು ದೇವಸ್ಥಾನದ ಹಿತದೃಷ್ಟಿಯಿಂದ ಸದರಿ ದೇವಸ್ಥಾನದ ಮ್ಯಾನೇಜರ್‌ರವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿದ್ದರು. ಸಮಿತಿಯ ಸದಸ್ಯರು ಧಾರ್ಮಿಕ ದತ್ತಿ ಆಯುಕ್ತರ ಆದೇಶದ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು. ರೀಟ್ ಅರ್ಜಿ ಸ ಖ್ಯೆ:೧೮೯೪/೯೦ರ ಇ. ಎ. ನಂ. ೨ರಲ್ಲಿ ಸದರಿ ಸಮಿತಿಯ ಸದಸ್ಯರು ಮುಂದುವರಿಯಬಹುದೆಂದು ಆಜ್ಞೆ ಪಡೆದಿರುತ್ತಾರೆ. ಈ ಆದೇಶದಿಂದ ದೇವಸ್ಥಾನದ ಹಿತದೃಷ್ಟಿಗೆ ಭಂಗವಾಗಿರುವುದರಿಂದ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗ ಪೀಠದ ಮುಂದೆ ರಿಟ್ ಅಪೀಲು ಸಂಖ್ಯೆ: ೩೬೯/೯೦ರ ಅಫೀಲು ಸಲ್ಲಿಸಿ ಸದರಿ ನ್ಯಾಯಾಲಯವು ತನ್ನ ಆದೇಶದಲ್ಲಿ ಹೊಸ ಸಮಿತಿಯು ರಚಿಸುವವರೆಗೆ ಸಹಾಯಕ ಆಯುಕ್ತರ ದರ್ಜೆಯ ಅಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸುವಂತೆ ಆದೇಶಿಸಿರುತ್ತದೆ. ಅದರ ಪ್ರಕಾರ ದಾರ್ಮಿಕ ದತ್ತಿ ಆಯುಕ್ತರು, ಸಹಾಯಕ ಆಯುಕ್ತರುಹೆಚ್. ಆರ್. ಅಂಡ್ ಸಿ. ಇ. ಮಂಗಳೂರು ಇವರನ್ನು ಹಚ್ಚಿನ ಪ್ರಭಾರದ ಮೇರೆಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ.

ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗ ಪೀಠವು ರಿಟ್ ಅರ್ಜಿ ಸಂಖ್ಯೆ: ೩೬೯/೯೦ ಸಹಾಯಕ ಆಯುಕ್ತರ ದರ್ಜೆಯ ಅಧಿಕಾರಿಯನ್ನು ಈ ದೇವಸ್ಥಾನದ ಆಡಳಿತಾಧಿಕಾರಿಯಾಗಿ ನೇಮಿಸುವಂತೆ ಆದೇಶಿಸಿರುವ ಆದೇಶದ ವಿರುದ್ಧ ಹಿಂದಿನ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ರವೀಂದ್ರನಾಥ ಶೆಟ್ಟಿ ಎಂಬುವವರು ಭಾರತದ ಶ್ರೇಷ್ಠ ನ್ಯಾಯಾಲಯದಲ್ಲಿ ವಿಶೇಷ ರಜೆ ಅರ್ಜಿ ಸಂಖ್ಯೆ: ೬೦೭೩/೯೦ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ನ್ಯಾಯಾಲಯವು ಅರ್ಜಿಯನ್ನು ವಿಲೇ ಮಾಡುತ್ತ ಈ ಕೆಳಕಂಡ ಆದೇಶಿಸಿರುತ್ತದೆ.

> "We hope and expect that the High Court will dispose of the writ petition as early as possible preferably within a period of 3 months from the date of re-opening of the court".

ಉಚ್ಚ ನ್ಯಾಯಾಲಯದ ಅಂತಿಮ ನಿರ್ಣಯ ನಿರೀಕ್ಷಿಸಲಾಗಿದೆ. ಆಸರೆವಿಗ ಈ ವಿಷಯ ಸಬಿ ಜುಡಿಸ್ ಆಗಬಹುದು.

ಹುಂಡಿಗಳು:—ಹೊಸದಾಗಿ ಆಡಳಿತ ಮಂಡಲಿ ರಚಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಕರೆದ ಅರ್ಜಿಗಳ ನೋಟೀಪಿಕೇಶನ್ ಮೇಲೆ ತಡೆಯಾಜ್ಞೆ ಇರುವುದಾಗಿ ಹೇಳಿಕೊಂಡು ಮಾಜಿ ಆಡಳಿತ ಮೊಕ್ತೇಸರರು ಸದರಿ ಹುಂಡಿಗಳ ಬೀಗದ ಕೈಯನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿದ್ದಾರೆ. ಅದರಿಂದಾಗಿ ಈವರೆವಿಗೆ ಅವರಿಂದ ಬೀಗದ ಕೈಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಆದರೂ ಭಕ್ತಾದಿಗಳ ಅನುಕೂಲಕ್ಕಾಗಿ ಹೊಸದಾಗಿ ಹುಂಡಿಯನ್ನು ಸ್ಥಾಪಿಸಲಾಗಿದೆ ಮತ್ತು ಅದು ಆಡಳಿತಾಧಿಕಾರಿಯವರ ನಿಯಂತ್ರಣ ಮತ್ತು ರಕ್ಷಣೆಯಲ್ಲಿದೆ.

ಸಾಮಾನ್ಯ: ಹಿಂದಿನ ಆಡಳಿತ ಮಂಡಲಿಯವರು ತಮ್ಮ ಅಧಿಕಾರ ಅವಧಿಯಲ್ಲಿ ನಡೆಸಿದ ಅವ್ಯವಹಾರಗಳ ಬಗ್ಗೆ ಇರುವ ಆಡಿಟ್ ಆಕ್ಷೇಪಣೆ ಬಗ್ಗೆ ಕಾರಣ ಕೇಳಿ ನೋಟೀಸ್ ನೀಡಿದ್ದರೂ ಸೂಕ್ತ ಸಮಜಾಯಿಷಿ ನೀಡದೆ ಇರುವುದರಿಂದ ಸದರಿ ಪ್ರಕರಣದ ಬಗ್ಗೆ ಸಿ. ಓ. ಡಿ. ತನಿಖೆಗೆ ಒಪ್ಪಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. ಹಿಂದಿನ ಆಡಳಿತ ಮಂಡಳಿಯವರು ಮತ್ತೆ ದೇವಾಲಯದ ಆಡಳಿತದಲ್ಲಿ ಪ್ರವೇಶಿಸದಂತೆ ಕ್ರಮ ಕೈಗೊಳ್ಳಲಾಗಿದೆ.

೧೦.೫೦ ಎ. ಎಂ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಅತ್ಯಂತ ಪ್ರತಿಷ್ಠಿತವಾದ ಹೆಮ್ಮೆಯ ದೇವಸ್ಥಾನವಾದ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನಡೆದಿರುವಂತಹ ಅನ್ಯವ್ಯವಹಾರಗಳ ಬಗ್ಗೆ ತಮ್ಮ ಉತ್ತರದಲ್ಲಿಯೇ ಸಾಕಷ್ಟು ಸಾಕ್ಷ್ಯಾಧಾರ ದೊರೆತಿದೆ. ನಾನು ಮಂತ್ರಿಗಳಿಗೆ ಒತ್ತಾಯ ಮಾಡುವಂಥಾದ್ದು ಏನೆಂದರೆ, ಈ ಎಂಡೋಮೆಂಟ್ ಕಮೀಷನರ್ ಇದ್ದ ಮೇಲೂ ಸಹ ಅವರು ಆಗಾಗ್ಗೆ ದೇವಸ್ಥಾನಕ್ಕೆ ಹೋಗಿ ತಪಾಸಣೆ ಮಾಡುವಂತಹದು ಮತ್ತು ಅವ್ಯವಹಾರವಾಗಿದ್ದರೆ ಕ್ರಮ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಿದ್ದರೆ ಈ ರೀತಿ ಆಡಿಟ್ ವರದಿಯಲ್ಲಿ ೨೭ ಲಕ್ಷ ರೂಪಾಯಿಗಳ ದುರುಪಯೋಗ ಆಗಿದೆ ಎಂದು ಬರುತ್ತಾ ಇರಲಿಲ್ಲ. ತಾವು ಕೊಟ್ಟಿರುವ ಉತ್ತರದ ಪ್ರಕಾರ ಅಲ್ಲಿನ ಟ್ರಸ್ಟಿಗಳು ಅಲ್ಲಿಗೆ ಪ್ರತಿದಿನ ಬರತಕ್ಕಂಥ ಸಾವಿರಾರು ಜನರ ಭಕ್ತಾದಿಗಳು ಕಾಣಿಕೆ ಡಬ್ಬಿಗೆ ದುಡ್ಡನ್ನು ಹಾಕುತ್ತಾರೆ, ಇದರ ಮೂಲಕ ಅಲ್ಲಿನ ಟ್ರಸ್ಟಿಗಳು ಬೇರೆ ಬೇರೆ ಶಾಲಾ ಕಾಲೇಜುಗಳನ್ನು, ಬೇರ ಬೇರೆ ಛತ್ರಗಳನ್ನು ನಡೆಸುತ್ತಿದ್ದಾರೆ. ಇದರ ಮೂಲಕ ಭಕ್ತಾದಿಗಳು ಕೊಟ್ಟಂತಹ ಹಣವನ್ನು ದುರುಪಯೋಗ ಮಾಡಿಕೊಂಡು ಅವರು ಶ್ರೀಮಂತರಾಗುವಂತಹ ಅನೇಕ ಉದಾಹರಣೆಗಳು ಇಲ್ಲಿ ಸಾಬೀತು ಆಗಿವೆ. ನನಗೆ ಗೊತ್ತಿರುವ ಪ್ರಕಾರ ಸುಮಾರು ೭೮ ಲಕ್ಷ ರೂಪಾಯಿಗಳ ದುರುಪಯೋಗ ಆಗಿದೆ. ಆಡಿಟ್ ವರದಿ ಇನ್ನೂ ಅನೇಕ ವಿವರಗಳನ್ನೂ ಒಳಗೊಂಡಿದೆ. ಇನ್ನೂ ಎರಡು ಮೂರು ಅಂಶಗಳ ಬಗ್ಗೆ ನನಗೆ ಗೊತ್ತಿರುವ ಸತ್ಯವಾದ ಮಾಹಿತಿಯನ್ನು ತಮ್ಮ ಗಮನಕ್ಕೆ ತರುತ್ತೇನೆ. ನ್ಯಾಯ ಸಿಗಬೇಕು ಎಂದರೆ ಇದರ ಬಗ್ಗೆ ತಕ್ಷಣ ಸಿ.ಓ.ಡಿ. ತನಿಖೆ ಮಾಡಿಸಿ. ಇದರ ಪರಿಣಾಮ ಬೇರೆಯವರ ಮೇಲೂ ಆಗುತ್ತದೆ. ಈ ರೀತಿ ಟ್ರಸ್ಟಿಗಳು ಹಣ ದುರುಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ನಾವು ಶಿಕ್ಷೆಗೆ ಒಳಪಡಬೇಕಾಗುತ್ತದೆ. ಜೈಲು ವಾಸ ಅನುಭವಿಸಬೇಕಾಗುತ್ತದೆ ಎನ್ನುವ ವಾತಾವರಣ ನಿರ್ಮಾಣ ಆಗಬೇಕಾದರೆ ಬೇರೆ ಬೇರೆ ದೇವಸ್ಥಾನಗಳಲ್ಲಿನ ಟ್ರಸ್ಟಿಗಳು ಈ ರೀತಿ ದುರುಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವ ಭಯದ ವಾತಾವರಣ ಮೂಡುತ್ತದೆ. ಆದಕ್ಕೋಸ್ಕರ ಸರ್ಕಾರವನ್ನು ಈ ಬಗ್ಗೆ ಸಿ.ಓ.ಡಿ. ತನಿಖೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನೂ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ದೇವಸ್ಥಾನದ ಪತಿಯಿಂದ ಪ್ರಥಮ ದರ್ಜೆ ಕಾಲೇಜನ್ನು ನಡೆಸಲಾಗುತ್ತಿದೆ. ಹಿಂದೆ ಈ ಕಾಲೇಜು ಕಟ್ಟಡದ ಗ್ರೌಂಡ್ ಫ್ಲೋರ್ ಕಟ್ಟುವಂತಹ ಸಂದರ್ಭದಲ್ಲಿ ಒಬ್ಬ ಕಂಟ್ರಾಕ್ಟ್‌ದಾರರಿಗೆ ಕೆಲಸ ಕೊಟ್ಟು ೬ ಲಕ್ಷ ೩೦ ಸಾವಿರ ರೂಪಾಯಿಗಳಲ್ಲಿ ಅದನ್ನು ಕಂಪ್ಲೀಟ್ ಮಾಡಿದರು. ಇದೇ ಸಂದರ್ಭದಲ್ಲಿ ಫಸ್ಟ್ ಫ್ಲೋರ್ ಕೆಟ್ಟಿಸುವುದರಲ್ಲಿ ೭ ಲಕ್ಷ ೧೧ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ನಮಗೆಲ್ಲಾ ಗೊತ್ತಿರುವ ಹಾಗೆ, ಗ್ರೌಂಡ್ ಫ್ಲೋರ್ ಕಟ್ಟುವುದಕ್ಕೆ ಜಾಸ್ತಿ ದುಡ್ಡು ಖರ್ಚಾಗುತ್ತದೆ, ಫಸ್ಟ್ ಫ್ಲೋರ್‌ಗೆ ಅಷ್ಟು ದುಡ್ಡು ಬೇಕಾಗಿಲ್ಲ. ಈ ರೀತಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳ ವ್ಯತ್ಯಾಸ ಇದೆ. ಟೆಂಡರ್ ಕರೆಯದೇ ಈ ಒಂದು ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಮೇಜು ಕುರ್ಚಿಗಳನ್ನು ತಂದಿದ್ದಾರೆ. ಅದರಲ್ಲಿ ಹಣ ದುರುಪಯೋಗ ಆಗಿದೆ. ರವೀಂದ್ರನಾಥ ಶೆಟ್ಟಿ ಎಂಬ ಒಬ್ಬರು ಟ್ರಸ್ಟಿ ಅವರ ಟ್ರಸ್ಟಿಯ ಅವಧಿ ಮುಗಿದ ಮೇಲೆ ದಿನಾಂಕ ೨೮.೦೪.೯೦ರಂದು ಹಾಗೂ ೨೯.೦೪ ೯೦ರಂದು ೬೭.೫೦ ರೂಪಾಯಿಗಳನ್ನು ಡ್ರಾ ಮಾಡಿ ಆ ಹಣವನ್ನು ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ತಮ್ಮ ಪರ್ಸನಲ್ ಅಕೌಂಟ್‌ನಲ್ಲಿ ಇಟ್ಟುಕೊಂಡಿದ್ದಾರೆ. ಬಹುಶಃ ಇದಕ್ಕಿಂತ ದೊಡ್ಡ ಭ್ರಷ್ಟಾಚಾರ ನಡೆಯುವುದಕ್ಕೆ ಸಾಧ್ಯ ಇಲ್ಲ. ಅಲ್ಲಿ ಒಬ್ಬ ಪ್ರಫುಲ್ಲ ಚಂದ್ರರೈ ಎನ್ನುತಕ್ಕವರು ಅವರ ಸ್ವಂತ ಆಡಳಿತಕ್ಕೆ ಒಳಪಟ್ಟಿರುವ ಉಮಾಮಹೇಶ್ವರಿ ದೇವಸ್ಥಾನಕ್ಕೆ ಈ ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಸುಮಾರು ೬೦ ಸಾವಿರ ಹಣವನ್ನು ಡ್ರಾ ಮಾಡಿದ್ದಾರೆ. ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಅದು ಕಾನೂನುಬಾಹಿರವಾದಂಥಾದ್ದು. ಬಹುಶಃ ಅದಕ್ಕೆ ಎಂಡೋಮೆಂಟ್ ಕಮಿಷನರ್‌ರವರ ಅನುಮತಿ ಸಿಗುವುದಕ್ಕೆ ಸಾಧ್ಯವಿಲ್ಲ. ಇದಲ್ಲದೆ ಸಿಂಡಿಕೇಟ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬ್ಯಾಂಕ್‌ನಲ್ಲಿ ಠೇವಣಿ ಹಣ ಇದೆ. ಈ ದುಡ್ಡು ಆಗತ್ಯವಿರಲಿಲ್ಲ. ಫಿಕ್ಸೆಡ್ ಡಿಪಾಸಿಟ್ಟನ್ನು ಅವಧಿಗೆ ಮುಂಚೆ ಬಡ್ಡಿ ಎಲ್ಲ ಹಾಳುಮಾಡಿ ಡ್ರಾ ಮಾಡುವಂಥ ಪ್ರಯತ್ನ ಮಾಡಿದ್ದಾರೆ. ಈ ರೀತಿ ಅನೇಕ ಅವ್ಯವಹಾರ ನಡೆದಿರುವುದರಿಂದ, ತಮ್ಮ ಗಮನಕ್ಕೆ ಬಂದು, ತಮ್ಮ ಉತ್ತರದಲ್ಲಿ ಸಾಕಷ್ಟು ವಿವರ ಇರುವುದರಿಂದ ಮೊದಲು ಆ ಟ್ರಸ್ಟಿಗಳು ಮುಂದುವರಿಯುವುದಕ್ಕೆ ಅವಕಾಶಕೊಡದೆ ಹೊಸ ಟ್ರಸ್ಟಿಗಳನ್ನು ನೇಮಕ ಮಾಡಬೇಕು. ಅಲ್ಲಿ ಅನುಭವಿರುವಂಥ, ದೇವಸ್ಥಾನದ ಅಭಿವೃದ್ಧಿಗೋಸ್ಕರ ಕೆಲಸ ಮಾಡತಕ್ಕಂಥ, ಸ್ವಾಮಿಗಳನ್ನೊಳಗೊಂಡಂತೆ, ಅವರನ್ನೂ ಸೇರಿಸಿಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡುವಂಥ ಸರಿಯಾದಂಥ ಟ್ರಸ್ಟಿಗಳನ್ನು ಮಾಡಿ. ಎರಡನೆಯದು, ಆಡಿಟ್ ವರದಿಯಲ್ಲಿ ಏನೇನು ನ್ಯೂನತೆಗಳಿವೆ, ಲೋಪದೋಷಗಳಿವೆ, ಅದರ ಮೇಲೆ ಸಿ.ಓ.ಡಿ. ತನಿಖೆಮಾಡಿಸಿ, ಅವರನ್ನು ಶಿಕ್ಷೆಗೆ ಒಳಪಡಿಸುವಂಥ ಪ್ರಯತ್ನವನ್ನು ತಾವು ಮಾಡಬೇಕು. ಅಲ್ಲಿ ಈ ರೀತಿ ಅವ್ಯವಹಾರಗಳು ನಡೆದಿದೆ, ಬೇರೆ ಬೇರೆ ಕಟ್ಟಡಗಳಿಗೆ ದುಡ್ಡನ್ನು ತೆಗೆದುಕೊಂಡಿದ್ದಾರೆ, ಇದಕ್ಕೆ ಎಂಡೋಮೆಂಟ್ ಕಮಿಷನರಿಂದ ಅನುಮತಿ ಪಡೆದಿದ್ದಾರೆಯೇ ಎನ್ನುವುದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಇನ್ನೊಂದು ಪ್ರಮುಖವಾಗಿರತಕ್ಕಂಥ ವಿಷಯ ಏನೆಂದರೆ, ಆಲ್ಲಿರತಕ್ಕ ಗೋಲಕಗಳಲ್ಲಿ ಭಕ್ತಾದಿಗಳು ದುಡ್ಡನ್ನು ಹಾಕುತ್ತಾ ಇದ್ದಾರೆ. ಅದನ್ನು ತೆಗೆಯುದಿದ್ದುದರ ಪರಿಣಾಮವಾಗಿ ಗೋಲಕಕ್ಕೆ ಹಾಕಿದಂಥ ನೋಟುಗಳು ನೆಲಕ್ಕೆ ಬೀಳುತ್ತಿವೆ ಒಂದು ಗೋಲಕ ತುಂಬಿ ಇನ್ನೊಂದು ಗೋಲಕವನ್ನು ಬೇರೆಕಡೆಯಿಂದ ತಂದಿದ್ದಾರೆ, ಅದೂ ತುಂಬಿದೆ. ಆ ಗೋಲಕವನ್ನು ಹೊಡೆದಿಲ್ಲ, ದುಡ್ಡನ್ನು ಎಣಿಸಿಲ್ಲ. ಆದಕ್ಕೋಸ್ಕರ ಎಂಡೋಮೆಂಟ್ ಕಮಿಷನರ್ ಹೋಗಿ ಅಲ್ಲಿ ಲಕ್ಷಾಂತರ ರೂಪಾಯಿ ಇರುವುದರಿಂದ ಆ ಗೋಲಕದ ದುಡ್ಡನ್ನು ತೆಗೆದು ಹೊಸ ಗೋಲಕವನ್ನು ಇಡುವಂಥ ಪ್ರಯತ್ನ ಮಾಡಿ ಸರಿಯಾದ ಬಿಗಿಯಾದ ನಿಲುವನ್ನು ತೆಗೆದುಕೊಂಡರೆ ಈ ರೀತಿ ಅನೇಕ ಕಡೆ ಭಕ್ತಾಧಿಗಳು ಭಕ್ತಿಯಿಂದ ಕೊಡುವಂಥ ಲಕ್ಷಾಂತರ ರೂಪಾಯಿ ದುರುಪಯೋಗವಾಗುವುದನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಸ್ಪೆಷಲ್ ಕೇಸ್ ಎಂದು ತಾವು ಪರಿಗಣಿಸಿ ಸಿ.ಓ.ಡಿ. ತನಿಖೆಯನ್ನು ಮಾಡಬೇಕು ಎಂದು ತಮ್ಮನ್ನು ಆಗ್ರಹ ಮಾಡುತ್ತಾ ಇದ್ದೇನೆ. ಸ್ವಾಮಿಗಳನ್ನೊಳಗೊಂಡಂತೆ ಟ್ರಸ್ಟಿಗಳನ್ನು ನೇಮಕ ಮಾಡಬೇಕು ಎಂದು ನನ್ನ ವಿನಂತಿ.

ಶ್ರೀ ಕೆ. ಹೆಚ್. ಪಾಟೀಲ್ —ಮಾನ್ಯ ಸದಸ್ಯರ ಮನೋವೇದನೆಯನ್ನು ನಾನು ಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆ. ನನ್ನ ಹೇಳಿಕೆಯಲ್ಲೂ ಸಹಿತ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದೇನೆ. ಇದರಲ್ಲಿ ಅವ್ಯವಹಾರವಾಗಿದೆ, ದುರುಪಯೋಗವಾಗಿದೆ, ಕಾನೂನು ವಿರುದ್ಧ ಕಾರ್ಯ ಆಗಿದೆ. ಇದೆಲ್ಲಾ ಗಮನಕ್ಕೆ ಬಂದಮೇಲೆ ಅವರು ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದರ ಪರಿಣಾಮವಾಗಿ ಡಿಲೇ ಆಗಿದೆ. ಮೊದಲೇ ಹೆಚ್ಚು ನಿಗಾವಹಿಸಿ ಸೂಪರ್‌ವಿಷನ್ ಮಾಡಿದ್ದರೆ ಈ ರೀತಿ ಹೆಚ್ಚು ಹಣದ ಆಪವ್ಯಯವಾಗುತ್ತಾ ಇರಲಿಲ್ಲ ಎನ್ನುವ ಮಾತನ್ನು ಒಪ್ಪುತ್ತೇನೆ. ಇವತ್ತಿನ ದಿವಸ ಎರಡನೆಯ ಹುಂಡಿ ಇಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಅಲ್ಲಿ ಹಣ ತುಂಬಿ ಬೀಳುತ್ತಾ ಇಲ್ಲ. ಮತ್ತೊಂದು ಹುಂಡಿ ಇಟ್ಟಿದ್ದಾರೆ. ಮೊದಲನೆಯದನ್ನು ತೆಗೆಯಲಿಕ್ಕೆ ಕೋರ್ಟ್ ತಗಾದೆ ಇದುದ್ದರಿಂದ, ಎರಡನೆಯ ಹುಂಡಿ ಇಟ್ಟು ಆ ಹುಂಡಿಯಲ್ಲಿ ಭಕ್ತರು ಹಣ ಹಾಕಬೇಕು ಎಂದು ಮಾಡಿದ್ದಾರೆ. ಈ ಪ್ರಕರಣವನ್ನು ಸಿ.ಓ.ಡಿ. ಗೆ ಹಾಕುತ್ತೇನೆ ಎಂದು ನಾನು ಈಗಾಗಲೆ ಹೇಳಿದ್ದೇನೆ. ಆವರು ಒತ್ತಾಯ ಮಾಡುವ ಪೂರ್ವದಲ್ಲಿ ನಾನು ಹೇಳಿದ್ದೇನೆ. ಎಲ್ಲೆಲ್ಲಿ ದೇವಸ್ಥಾನಗಳಿವೆಯೋ ಆ ದೇವಸ್ಥಾನಗಳಲ್ಲಿ ಆಗತಕ್ಕಂಥ ಅವ್ಯವಹಾರವನ್ನು, ಅಪವ್ಯಯ ಆಗುವುದನ್ನು ತಡೆಹಿಡಿಯಲಿಕ್ಕೆ ಸರ್ಕಾರ ಅತ್ಯಂತ ಉಗ್ರವಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ. ನಿರ್ಭೀತಿಯಿಂದ ದೇವಾಲಯವನ್ನು ನಡೆಸತಕ್ಕಂಥ ವ್ಯವಸ್ಥಾಪಕರು ಆಲ್ಲಿ ಏನು ಅವ್ಯವಹಾರ ಮಾಡುತ್ತಾರೆ ಅದರ ಬಗ್ಗೆ ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆ. ದೇವಾಲಯದ ಹಣದಿಂದ ಅನೇಕ ಕಡೆಗಳಲ್ಲಿ ಸ್ಕೂಲುಗಳನ್ನು ಕಾಲೇಜುಗಳನ್ನು ತೆಗೆಯುತ್ತೇವೆಂದು ಹಣವನ್ನು ವ್ಯಯ ಮಾಡುವಂಥ ದುರ್ಬುದ್ಧಿ ಸಹಿತ ಹುಟ್ಟಿದೆ. ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆದರೂ ಸಹ ಅವರು ಮಾಡಿಕೊಂಡು ಕ್ಯಾಪಿಟೇಷನ್ ಪ್ರಭಾವದಿಂದ ಈ ಹಣವನ್ನು ದುರುಪಯೋಗ ಮಾಡಲಿಕ್ಕೆ ದೇವಾಲಯಗಳವರು ಮುಂದೆ ಬರುತ್ತಾ ಇದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಎಲ್ಲಮ್ಮ ಟೆಂಪಲ್‌ನಲ್ಲಿ ಹೀಗೆ ಆಗಿದ್ದುದರಿಂದ ಆ ಟೆಂಪಲ್ ಸಮಿತಿಯನ್ನು ನಿನ್ನೆ ರದ್ದು ಮಾಡಿದ್ದೇನೆ, ಇದೇ ದೃಷ್ಟಿಯಿಂದ ಈ ದೇವಾಲಯ ಬಂದಿವೆ. ಈ ಬಗ್ಗೆ ಸೂಕ್ತವಾದ ವಿಚಾರವನ್ನು ಮಾಡುತ್ತೇನೆ. ಮತ್ತೆ ಬಿಲ್ಡಿಂಗ್ ಕಟ್ಟುವುದರ ಸಲುವಾಗಿ ಕೆಳಗೆ ೭ ಲಕ್ಷವಾಯಿತು, ಮೇಲೆ ೭ ಲಕ್ಷವಾಯಿತು ಎಂದು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಎಷ್ಟು ಖರ್ಚು ಆಯಿತು ಎಂದು ನಾನು ಈಗ ಹೇಳಲಿಕ್ಕೆ ಆಗುವುದಿಲ್ಲ. ಅದನ್ನು ವಿಚಾರ ಮಾಡಬೇಕಾಗುತ್ತದೆ. ಅವತ್ತು ಮಾರ್ಕೆಟ್ ರೇಟ್ ಏನಿತ್ತು, ಕಬ್ಬಿಣದ ರೇಟ್ ಎಷ್ಟಿತ್ತು, ಅದು ಎಷ್ಟೇ ಇದ್ದರೂ ಸಹ ಹೆಚ್ಚು ಇರಲಿ, ಕಡಿಮೆ ಇರಲಿ ಎಂಡೋಮೆಂಟ್ ಕಮಿಷನರ್‌ರಿಂದ ಪ್ಲಾನ್, ಎಸ್ಟಿಮೆಂಟ್ ಮಂಜೂರು ಮಾಡದೆ ಮಾಡಿದ್ದರೆ ಅದು ನಿಜವಾಗಿಯೂ ದುರುಪಯೋಗವಾಗುತ್ತದೆ, ಆ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

† ಶ್ರೀ ಎ. ರುಕ್ಮಯ್ಯ ಪೂಜಾರಿ.—ಮಾನ್ಯ ಸಚಿವರು ಉತ್ತರದಲ್ಲಿ ಸಾಧಾರಣ ಮಾಹಿತಿಯನ್ನು ಕೊಟ್ಟಿದ್ದಾರೆ. ತಮಗೆಲ್ಲ ಗೊತ್ತಿರುವಹಾಗೆ, ಅದು ಸುಳ್ಯ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ ಏನಿದೆ. ಅದು ಕೇವಲ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸಂಬಂಧಪಟ್ಟದ್ದಲ್ಲ, ಆಲ್ಲಿಗೆ ಇಡೀ ರಾಜ್ಯಾದ್ಯಂತ ಭಕ್ತಾಧಿಗಳು ಬರುತ್ತಾರೆ, ದೇವರ ದರ್ಶನ ಮಾಡುತ್ತಾರೆ, ಕೃತಾರ್ಥರಾಗುತ್ತಾರೆ, ಅಂತಹ ದೇವಸ್ಥಾನದಲ್ಲಿ ದಿನನಿತ್ಯ ಸುಮಾರು ೧೦ ಸಾವಿರ ರೂಪಾಯಿಗಳಷ್ಟು ಹಣ ಕಾಣಿಕೆ ಡಬ್ಬಿಯಲ್ಲಿ ಸಂಗ್ರಹಣೆಯಾಗುತ್ತದೆ. ೫, ೬ ತಿಂಗಳಿಂದ ಆ ಡಬ್ಬಿಯನ್ನು ಹೊಡೆದಿಲ್ಲ. ನಮ್ಮ ಅಂದಾಜು ಪ್ರಕಾರ ೧೦–೧೫ ಲಕ್ಷ ರೂಪಾಯಿ ಹಣ ಅದರಲ್ಲಿ ಸಂಗ್ರಹವಾಗಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಈಗ ಮಳೆಗಾಲ, ಮಳೆ ಬರುತ್ತಾ ಇದೆ. ಮಳೆ ಹನಿ ಬಿದ್ದು ಅದರಲ್ಲಿರುವ ನೋಟುಗಳು ಹಾಳಾಗುವಂಥ ಪರಿಸ್ಥಿತಿ ಇದೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಆ ಡಬ್ಬಿಯನ್ನು ಹೊಡೆಯುವಂಥ ವ್ಯವಸ್ಥೆ ಮಾಡಬೇಕು. ಆಡಿಟ್ ವರದಿಯಲ್ಲಿ ೨೭ ಲಕ್ಷ ರೂಪಾಯಿ ದುರುಪಯೋಗವಾಗಿದೆ ಎಂದು ಹೇಳಿದ್ದಾರೆ

ಅಧ್ಯಕ್ಷರು.—ಸಿ. ಓ. ಡಿ, ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎ. ರುಕ್ಮಯ ಪೂಜಾರಿ.—ಸರ್ಕಾರಕ್ಕೆ ನನ್ನ ಒತ್ತಾಯ ಏನೆಂದರೆ, ಟ್ರಸ್ಟ್‌ಗಳನ್ನು ನೇಮಕ ಮಾಡುವಾಗ ಧರ್ಮದ ಬಗ್ಗೆ ಸ್ವಲ್ಪವಾದರೂ ಭಕ್ತಿ, ಗೌರವ ಇದ್ದವರನ್ನು ನೇಮಕ ಮಾಡುವುದು ಒಳ್ಳೆಯದು. ಈಗ ಆಲ್ಲಿ ಸುಬ್ರಮಣ್ಯಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿಗಳು ಇದ್ದಾರೆ. ಅವರನ್ನು ಕೂಡ ಒಬ್ಬರು ಟ್ರಸ್ಟಿಗಳನ್ನಾಗಿ ನೇಮಿಸಿದರೆ. ಬಹುಶಃ ದೇವಸ್ಥಾನಕ್ಕೆ ಇನ್ನೂ ಒಳ್ಳೆಯ ದಾಗಬಹುದು ಎನ್ನುವುದು ನನ್ನ ಆಸೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ, ಅದಕ್ಕಿಂತ ಹೆಚ್ಚಿನ ಕಳಕಳಿ ಸರ್ಕಾರಕ್ಕೂ ಇದೆ. ಆವರ ನಿರೀಕ್ಷೆಗೆ ಮೀರಿ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿಸುತ್ತೇನೆ. ಸಿ. ಓ. ಡಿ. ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಕೆ. ಕುಶಲ.—ಕಳೆದ ಮೂರು ಅಧಿವೇಶನದಲ್ಲಿಯೂ ಈ ಪ್ರಶ್ನೆಯನ್ನು ಹಾಕಿದ್ದೆ ಬಹುಶಃ ಇಷ್ಟರತನಕ ಅದಕ್ಕೆ ಅವಕಾಶ ಆಗಲಿಲ್ಲ. ಈಗ ಗಮನ ಸೆಳೆಯುವ ಸೂಚನೆ ಹಾಕಿದ್ದೆ. ಅದರ ಮೇಲೆ ತಾವು ಅವಕಾಶ ಕೊಟ್ಟಿದ್ದೀರಿ. ಆರು ತಿಂಗಳ ಹಿಂದೆ ಸಿ. ಓ.ಡಿ. ಎನ್‌ಕ್ವೈರಿ ಮಾಡಲಿಕ್ಕೆ ಆಗಿನ ಮಂತ್ರಿಗಳಾದ ಅಜೀತ್‌ಸೇಟ್‌ರವರು ಒಪ್ಪಿಕೊಂಡಿದ್ದರು, ಆದರೆ ಉದ್ದೇಶ ಪೂರ್ವಕವಾಗಿ.....

MR. SPEAKFER.—The hon. Minister might kindly that note of the point raised by Hon. Member Shri Kushala. Earlier, this question had come up before the House and the then Revenue Minister had, according to him, agreed for a COD enquiry in this case. You will have to look into as to why. if the earlier Minister had given an assurance, that an enquiry would not be held, what came in the way ?

ಶ್ರೀ ಕೆ. ಕುಶಾಲ.—ಎರಡು ತಿಂಗಳಿಂದ ಹೋಂ ಡಿಪಾರ್ಟ್‌ಮೆಂಟ್‌ನಲ್ಲಿ ಪೆಂಡಿಂಗ್ ಇದೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರ ನಿರೀಕ್ಷೆಗೆ ಮೀರಿ ಸಿ. ಓ. ಡಿ. ತನಿಖೆಯಿಂದ ಯೋಗ್ಯ ನಿರ್ಣಯ ಬರುವುದಾದರೆ ಅದನ್ನು ಮಾಡಿಸುತ್ತೇನೆ. ಪೋಲೀಸ್ ಎನ್‌ಕ್ವೈರಿಯಿಂದ ಯೋಗ್ಯ ನಿರ್ಣಯ ಬರುವುದಾದರೆ ಅದನ್ನು ಮಾಡಿಸುತ್ತೇನೆ. ಇದರ ಜೊತೆಗೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿಸಿ, ಯೋಗ್ಯವಾದಂಥ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಕುಶಾಲ ಅವರೆ ನಿಮಗೆ ಸಿ. ಓ. ಡಿ. ಎನ್‌ಕ್ವೈರಿ ಬೇಕೋ, ಪೋಲೀಸ್ ಎನ್‌ಕ್ವೈರಿ ಬೇಕೋ, ಸಿ ಬಿ. ಐ. ಎನ್‌ಕೈರಿ ಬೇಕೋ, ಯಾವುದು ಬೇಕು ಹೇಳಿ.

ಶ್ರೀ ಕೆ. ಕುಶಾಲ.—ಸಿ. ಓ. ಡಿ. ಎನ್‌ಕ್ವೈರಿ ಆಗಬೇಕು, ೫–೬ ವರ್ಷಗಳ ಹಿಂದೆ ಆಗಿನ ಸರಕಾರದವರು ರಚಿಸಿದ ಒಂದು ಟ್ರಸ್ಟ್ ಇತ್ತು. ಶ್ರೀ ಅಮರನಾಥ ಶೆಟ್ಟಿ ಅವರನ್ನು ಒಳಗೊಂಡಂತೆ ಟ್ರಸ್ಟ್ ಇತ್ತು. ಈ ರೀತಿಯ ದೂರು ಬಂದಾಗ ಸಹಕಾರ ನೀಡಿದರು. ಆದರೆ, ಇದು ಹೊರ ಬರದಂತೆ ಕೈವಾಡ ಫಾಡಿ, ಇಷ್ಟರವರೆಗೆ ಬಂದಿಲ್ಲ. ೬ ತಿಂಗಳ ಹಿಂದೆ ಎತ್ತಿದರೂ ಅವಕಾಶ ಸಿಗಲಿಲ್ಲ. ಉತ್ತರ ಬಂದಿಲ್ಲ.

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಯಾವ ಸಂದೇಹವೂ ಬೇಡ. ಅವರ ನಿರೀಕ್ಷೆಗೆ ಸರಿಹೊಗುವಂಥ ತನಿಖೆಯನ್ನು ಯಾರಿಂದ ಸಾಧ್ಯವೋ ಅವರಿಂದ ಮಾಡಿಸಿ, ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಅವ್ಯವಹಾರ ನಡೆದಿರುವುದು ಸರ್ಕಾರದಗಮನಕ್ಕೆ ಬಂದಿದೆ. ಸಿ. ಓ. ಡಿ. ತನಿಖೆ ಮಾಡಿಸುತ್ತೇನೆಂದು ತಾವು ಹೇಳಿದ್ದಿರಿ, ಇದಕ್ಕಾಗಿ ಒಂದು ಇಲಾಖೆ ಇರಬೇಕಾದರೆ, ಎಂಡೋಕಮೀಷನರ್ ಇರಬೇಕಾದರೆ, ಇಷ್ಟೊಂದು ದುರ್ವ್ಯವಹಾರ ನಡೆದಿರ ಬೇಕಾದ, ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು. ಇದು ಕೇವಲ ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನಕ್ಕೆ ಸೀಮಿತವಾಗಿಲ್ಲ. ಎಲ್ಲಾ ದೇವಸ್ಥಾನಗಳಲ್ಲಿಯೂ ದುರ್ವ್ಯವಹಾರ ನಡೆದಿದೆ. ಇಲಾಖೆಯ ಅಧಿಕಾರಿಗಳು ಮಾಮೂಲು ತೆಗೆದುಕೊಂಡು ಅವ್ಯವಹಾರಕ್ಕೆ ಪರೋಕ್ಷವಾಗಿ ಬೆಂಬಲ ಕೊಡುತ್ತಾರೆ. ಇಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್.—ಎನ್‌ಕ್ವೈರಿ ಮಾಡಿಸುವುದು ಏಕೆಂದರೆ, ಇದರಲ್ಲಿ ಯಡಿಯೂರಪ್ಪ ನವರ ಸಂಬಂಧ ಇದೆಯೋ, ಪಾಟೀಲರ ಸಂಬಂಧ ಇದೆಯೋ, ಅಧಿಕಾರಿಗಳ ಸಂಬಂಧ ಇದೆಯೋ ಎಂದು ತಿಳಿದುಕೊಳ್ಳುವುದಕ್ಕಾಗಿ. ಯಾರನ್ನೂ ಬಿಡುವುದಿಲ್ಲ. ಸಿ. ಓ. ಡಿ. ತನಿಖೆಯನ್ನೂ ಮಾಡಿಸುತ್ತೇನೆ, ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿಯನ್ನೂ ಮಾಡಿಸುತ್ತೇನೆ. ತಪ್ಪು ಮಾಡಿರತಕ್ಕವರನ್ನು ಹಿಡಿದು ಶಿಕ್ಷೆ ಮಾಡುತ್ತೇನೆ.

ಶ್ರೀ ಕೆ. ಕುಶಾಲ.— ಸಿ, ಓ, ಡಿ. ವರದಿ ಬಗ್ಗೆ ಕಂದಾಯ ಇಲಾಖಾ ಕಾರ್ಯದರ್ಶಿಗಳು ತಪಹಿಡಿದಿದ್ದಾರೆ ಹೋಂ ಡಿಪಾರ್ಟ್‌ಮೆಂಟ್‌ನಲ್ಲಿ ೨ ತಿಂಗಳಿಂದ ಪೆಂಡಿಂಗ್ ಇದೆ. ಆರು ವರ್ಷಗಳ ಹಿಂದೆ ಟ್ರಸ್ಟ್‌ಗಳನ್ನು ನೇಮಕ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳು ಅರ್ಜಿ ಕರೆದರು ಅದನ್ನು ಮಾಡ ಬಾರದು ಎಂದು ತಡೆಯಾಜ್ಞೆ ತಂದರು. ತಡೆಯಾಜ್ಞೆ ಪಾತ್ರ ಬಾಕಿ ಇದೆ. ೫೦,೦೦೦ ಖರ್ಚು ಮಾಡಿ ಶ್ರೇಷ್ಠನ್ಯಾಯಾಲಯಕ್ಕೆ ಹೋದರು, ಹೋಗುವಂಥ ಉದ್ದೇಶ ಲಾಭ ಇದೆ. ೯೭ ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ಎಂಡೋಮೆಂಟ್ ಕಮೀಷನರ್, ಸಿ, ಓ. ಡಿ. ರಿಪೋರ್ಟ್ ಕೊಟ್ಟಿದ್ದಾರೆ.

ಅಧ್ಯಕ್ಷರು.—ಕುಶಾಲ್‌ರವರೆ, ಅವರು ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದಾರೆ, ಪುನಃ ನೀವು ಕೇಳಿದ್ದನ್ನೇ ಕೇಳುತ್ತಿದ್ದೀರಲ್ಲಾ.

(ಗೊಂದಲ)

ಶ್ರೀ ಕೆ. ಕುಶಲಾ.—ಅಧ್ಯಕ್ಷರೆ, ೨೪-೫-೧೯೯೦ರಂದು ೩೫ ಸಾವಿರ ರೂಪಾಯಿಗಳನ್ನು ಇದೇ ಹಿಂದಿನ ಟ್ರಸ್ಟ್‌ನ ಛೇರ್ಮನ್ನರಾದ ರಂಗನಾಥ ಶೆಟ್ಟಿಯವರು ಹಗಲು ದರೋಡೆ ಮಾಡಿ ಪೂಜೆಯ ಭಟರಿಂದ ಹಣವನ್ನು ಕದ್ದುಕೊಂಡು ಬಂದಿದ್ದಾರೆ. ಇದರ ಬಗ್ಗೆ ಕೇಸ್ ಹಾಕಿದ್ದಾರೆ. ಇದನ್ನು ಪೋಲೀಸ್ ಇಲಾಖೆಯವರು ಮುಚ್ಚಿಟ್ಟಿದ್ದರು. ಒಂದು ವಾರದ ನಂತರ ಅವರನ್ನು ಅರೆಸ್ಟ್ ಮಾಡಿದ್ದಾರೆ. ನಂತರ ಜಾಮೀನಿನ ಮೇಲೆ ಅವರ ಬಿಡುಗಡೆ ಆಯಿತು. ಹೈಕೋರ್ಟ್‌ನಲ್ಲಿ ಇವೊತ್ತ ಐದು ಜನ ನ್ಯಾಯವಾದಿಗಳನ್ನು ಹಿಡಿದುಕೊಂಡು ಇದಕ್ಕೆ ತಡೆಯಾಜ್ಞೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಪ್ರಕರಣ ೨೦ ನೇ ತಾರೀಖಿಗೆ ಇದೆ.

(ಗೊಂದಲ)

ಅಧ್ಯಕ್ಷರು.—ಈಗ ಏನಾಗುತ್ತದೆ ಗೊತ್ತಾ. ನೀವು ಪ್ರಶ್ನೆ ಕೇಳಿದಮೇಲೆ ಅವರು ೧೦ ಜನ ನ್ಯಾಯವಾದಿಗಳನ್ನು ಇಟ್ಟುಕೊಂಡು ಕೇಸ್ ಹಾಕುತ್ತಾರೆ ಅಷ್ಟೆ.

(ಗೊಂದಲ)